# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1203/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 16/06/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀಮತಿ ಎಸ್. ಲಾವಣ್ಯ ತಂದೆ ಕೃಷ್ಣ ಭಟ್, ಸಹಾಯಕ ನಿರ್ದೇಶಕರು/ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪಶ್ಚಿಮ ವಲಯ, ಮಂಗಳೂರು ಇವರು ದಕ್ಷಿಣ ಕನ್ನಡ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀಮತಿ ಎಸ್. ಲಾವಣ್ಯ ತಂದೆ ಕೃಷ್ಣ ಭಟ್, ಸಹಾಯಕ ನಿರ್ದೇಶಕರು/ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಪುತ್ತೂರು, ದಕ್ಷಿಣ ಕನ್ನಡ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ಪಿ. ಕೇಶವ ಸುವರ್ಣ ಬಿನ್ ದಿ: ಪೂವಪ್ಪ ಸುವರ್ಣ, ಮೇರ್ಲ ಮನೆ, ಆರ್ಯಾಪು ಗ್ರಾಮ ಮತ್ತು ಅಂಚೆ, ಪುತ್ತೂರು ತಾಲ್ಲೂಕು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **<u>ದೂರಿನ ಸಂಕ್ಷಿಪ್ತ ವಿವರಣೆ:-</u>** ದೂರುದಾರರು ಶ್ರೀ ಪಿ. ಕೇಶವ ಸುವರ್ಣ ಬಿನ್ ದಿ: ಪೂವಪ್ಪ ಸುವರ್ಣ ಮೇರ್ಲ ಮನೆ, ಆರ್ಯಾಪು ಗ್ರಾಮ ಮತ್ತು ಅಂಚೆ, ಪುತ್ತೂರು ತಾಲ್ಲೂಕು ಇವರ ಸ್ನೇಹಿತ ರಾಮಮೋಹನ್ ಪೈರವರು ಪುತ್ತೂರಿನ

ಕಸಬಾದಲ್ಲಿ ಸರ್ವೆ ನಂ. 241-2ಎ1ಬಿ ರಲ್ಲಿ 0.26 ಎಕ್ರೆ ಜಮೀನನ್ನು ಹೊಂದಿದ್ದು, ಅವರು ಈ ಜಮೀನಿನ ವಾಣಿಜ್ಯ ಉದ್ದೇಶಕ್ಕಾಗಿ ಭೂ ಪರಿವರ್ತನೆಗಾಗಿ, ದಿನಾಂಕ 22/02/2017 ರಂದು ಪುತ್ತೂರು ನಗರ ಯೋಜನಾ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು. ಸದರಿಯವರಿಗೆ ಅನಾರೋಗ್ಯ ಇರುವ ಕಾರಣ ಅವರ ಪರವಾಗಿ ದೂರುದಾರರು ದಿನಾಂಕ 11/04/2017 ರಂದು ಎದುರುದಾರರನ್ನು ಭೇಟಿಯಾಗಿ ಭೂ ಪರಿವರ್ತನೆ ಮಾಡಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲು ಕೋರಿದಾಗ ರೂ. 10,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಇದನ್ನು ದೂರುದಾರರು ತಮ್ಮಲ್ಲಿದ್ದ ಧ್ವನಿ ಮುದ್ರಿಕೆ ಸಾಧನದಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಎದುರುದಾರರಿಗೆ ಲಂಚದ ಹಣವನ್ನು ನೀಡಲು ಇಷ್ಟವಿಲ್ಲದ ಕಾರಣ ದಕ್ಷಿಣ ಕನ್ನಡ ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ಡಿ.ವಿ.ಡಿ. ಜೊತೆ ಲಿಖಿತ ದೂರನ್ನು ದಿನಾಂಕ 12/04/2017 ರಂದು ನೀಡಿರುತ್ತಾರೆ. ಈ ಬಗ್ಗೆ ಮಂಗಳೂರು ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಅಧಿಕಾರಿಯವರು ತಮ್ಮ ಠಾಣೆಯ ಗುನ್ನೆ ನಂ. 04/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 12/04/2017 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಲಿಪೀಕರಣ ಮಾಡಿರುತ್ತಾರೆ. ಸದರಿ ವಾಯ್ಸ್ ರೆಕಾರ್ಡರ್‌ನಿಂದ ಕಂಪ್ಯೂಟರಿಗೆ ಅಳವಡಿಸಿ ಅದನ್ನು ಸಿ.ಡಿ.ಗೆ ವರ್ಗಾಯಿಸಿ ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 10,000/- ಗಳನ್ನು ದೂರುದಾರರು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಮುಖ್ಯಪೇದೆ ಶ್ರೀ ಹರಿಪ್ರಸಾದರವರ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣಗಳನ್ನು ಪ್ರತ್ಯೇಕವಾಗಿ

ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ.

4) ಶ್ರೀಮತಿ ಹೆಚ್. ಶಾಂಭವಿ ರೇಷ್ಮೆ ಪ್ರದರ್ಶಕರು, ರೇಷ್ಮೆ ಇಲಾಖೆ, ರೇಷ್ಮೆ ಸಹಾಯಕ ನಿರ್ದೇಶಕರ ಕಛೇರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಕಛೇರಿ, ಮಂಗಳೂರು ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ತಿಳಿಸಬೇಕೆಂದು ತನಿಖಾಧಿಕಾರಿಗಳಿಗೆ ಮೊಬೈಲ್‌ನಿಂದ ಮಿಸ್ಡ್ ಕಾಲ್ ಕೊಡಲು ಸೂಚಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ಹೊರಗೆ ಬಂದು ಸಂಜ್ಞೆಯನ್ನು ಕೈಯಿಂದ ತಲೆ ಸವರಿಕೊಳ್ಳುವ ಮೂಲಕ ಅಥವಾ ಒಳಗಡೆಯಿಂದ ಮಿಸ್ಡ್ ಕಾಲ್ ಕೊಡುವ ಮೂಲಕ ನೀಡಬೇಕೆಂದು ಸೂಚಿಸಿರುತ್ತಾರೆ. ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆ ಮತ್ತು ಪಡೆದ ಸಮಯದಲ್ಲಿ ನಡೆಯುವ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡರ್‌ನಲ್ಲಿ ಮುದ್ರಣ ಮಾಡಿಕೊಳ್ಳಬೇಕೆಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ಬೆಳಗ್ಗೆ 10-30 ರಿಂದ 11-30 ರ ವರೆಗೆ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ದಕ್ಷಿಣಕನ್ನಡ ಜಿಲ್ಲೆ ಇಲ್ಲಿ ನಿರ್ವಹಿಸಿರುತ್ತಾರೆ.

5) ದೂರುದಾರರು, ಪಂಚ ಸಾಕ್ಷಿಗಳು, ಸಿಬ್ಬಂದಿಯವರೊಂದಿಗೆ ತನಿಖಾಧಿಕಾರಿಗಳು ದಿನಾಂಕ 12/04/2017 ರಂದು ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕು, ನಗರ ಯೋಜನಾ ಪ್ರಾಧಿಕಾರ ಕಛೇರಿಯಲ್ಲಿ ದೂರುದಾರರು ಮತ್ತು ನೆರಳು ಸಾಕ್ಷಿ ಶ್ರೀಮತಿ ಹೆಚ್. ಶಾಂಭವಿ, ರೇಷ್ಮೆ ಪ್ರದರ್ಶಕರು ಇವರ ಜೊತೆಗೂಡಿ ಎದುರುದಾರರ ಕೊಠಡಿಗೆ ಹೋದಾಗ ಅವರು ಕೈಯಿಂದ ಕೊಡಿ ಎಂಬಂತೆ ಸಂಜ್ಞೆ ಮಾಡಿದರು. ಅದಕ್ಕೆ ದೂರುದಾರರು ಕೊಟ್ಟುಬಿಡುತ್ತೇನೆ ಎಂದು ಹೇಳಿದಾಗ ಎದುರುದಾರರು ಎಷ್ಟಿದೆ ಎಂದು

ಕೇಳಿದರು, ಅದಕ್ಕೆ ದೂರುದಾರರು 10 ಎಂದು ಹೇಳಿ ತಾನು ತಂದ ರೂ. 10,000/- ಲಂಚದ ಹಣವನ್ನು ಎದುರುದಾರರಿಗೆ ನೀಡಿದ್ದು ಎದುರುದಾರರು ಆ ಹಣವನ್ನು ತನ್ನ ಬ್ಯಾಗಿನಲ್ಲಿ ಹಾಕಿಕೊಂಡಿರುತ್ತಾರೆ. ನಂತರ ಎದುರುದಾರರು ದೂರುದಾರರ ಫೈಲ್‌ಗೆ ಸಹಿ ಮಾಡಿರುತ್ತಾರೆ. ಆಗ ದೂರುದಾರರು ತನಿಖಾಧಿಕಾರಿಯವರಿಗೆ ಹೊರಗೆ ಬಂದು ಮಿಸ್ಡ್ ಕಾಲ್ ನೀಡಿರುತ್ತಾರೆ.

6) ನಂತರ ತನಿಖಾಧಿಕಾರಿ ಅವರು ತಮ್ಮ ಸಿಬ್ಬಂದಿ ಹಾಗೂ ಸಹ ಪಂಚನೊಂದಿಗೆ ಎದುರುದಾರರ ಕೊಠಡಿಯ ಒಳಗೆ ಬಂದು ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಉಳಿದವರ ಪರಿಚಯವನ್ನು ಮಾಡಿ ಎದುರುದಾರರ ಹೆಸರು, ಹುದ್ದೆ ಮುಂತಾದ ವಿಷಯಗಳ ಬಗ್ಗೆ ಕೇಳಿ ತಿಳಿದುಕೊಂಡು ಗಾಜಿನ ಬಾಟಲ್‌ನಲ್ಲಿ ಸೋಡಿಯಂ ಕಾರ್ಬೋನೇಟ್ ತಯಾರಿಸಿ ಮಾದರಿಗಾಗಿ ಒಂದು ಪ್ಲಾಸ್ಟಿಕ್ ಬಾಟಲ್‌ನಲ್ಲಿ ಬಣ್ಣ ರಹಿತ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಪ್ರತ್ಯೇಕವಾಗಿ ತೆಗೆದು ನಂತರ ಎರಡೂ ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಸಮನಾಗಿ ತಯಾರಿಸಿ ಎದುರುದಾರರ ಎರಡೂ ಕೈಗಳನ್ನು ಪ್ರತ್ಯೇಕವಾಗಿ ಸದರಿ ದ್ರಾವಣದಲ್ಲಿ ಅದ್ದಿ ತೊಳೆದಾಗ ಅವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆ ಆಗಿರುತ್ತದೆ. ಅವುಗಳನ್ನು ತನಿಖಾಧಿಕಾರಿಗಳು ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ.

7) ತನಿಖಾಧಿಕಾರಿಗಳು ದೂರುದಾರರ ಮತ್ತು ನೆರಳು ಸಾಕ್ಷಿ ಇವರಿಂದ ಅಲ್ಲಿ ನಡೆದ ವಿಷಯವನ್ನು ಆಲಿಸಿ, ಎದುರುದಾರರು ತಮ್ಮ ಬ್ಯಾಗಿನಲ್ಲಿ ಲಂಚದ ಹಣವನ್ನು ಇಟ್ಟುಕೊಂಡ ಬಗ್ಗೆ ಹೇಳಿದಾಗ, ಸದರಿ ಹಣವನ್ನು ಹಾಜರುಪಡಿಸುವಂತೆ ಹೇಳಿದಾಗ ಸಹ ಪಂಚ ಇವರು ಎದುರುದಾರರ ಬ್ಯಾಗಿನಿಂದ ಲಂಚದ ಹಣವನ್ನು ಹಾಜರುಪಡಿಸಿ, ಅವುಗಳ ಮುಖಬೆಲೆ ಮತ್ತು ನೋಟುಗಳ ಸಂಖ್ಯೆ ಪರಿಶೀಲಿಸಿದಾಗ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ನಮೂದಿಸಿದ ನೋಟುಗಳ ಮೌಲ್ಯ ಹಾಗೂ ಅವುಗಳ ಸಂಖ್ಯೆ ಒಂದಕ್ಕೊಂದು ತಾಳೆಯಾಗಿದ್ದು ಅವುಗಳನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ. ಪಂಚನಾಮೆ ಕಾಲದಲ್ಲಿ ಎದುರುದಾರರು ಲಂಚದ ಹಣವನ್ನು ಇಟ್ಟಿದ್ದ ಬ್ಯಾಗಿನ ಹಣವಿದ್ದ ಭಾಗಕ್ಕೆ ಒಂದು ದಾರವನ್ನು ಕಟ್ಟಿ ಅದಕ್ಕೆ ಮಾರ್ಕರ್ ಪೆನ್ನಿನಿಂದ ಗುರುತು ಮಾಡಿ ಒಂದು ಪೇಪರ್‌ನಲ್ಲಿ ಸುತ್ತಿ ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ, ಸೀಲ್ ಮಾಡಿ ವಶಪಡಿಸಿಕೊಂಡಿರುತ್ತಾರೆ.

8) ಈ ಬಗ್ಗೆ ಎದುರುದಾರರಿಗೆ ಲಿಖಿತ ರೂಪದಲ್ಲಿ ಸಮಜಾಯಿಷಿ ನೀಡಲು ತನಿಖಾಧಿಕಾರಿಗಳು ಸೂಚಿಸಿದಾಗ ಸದರಿಯವರು ತಮ್ಮ ಸಮಜಾಯಿಷಿ ನೀಡಿರುತ್ತಾರೆ. "ನಾನು ಬ್ಲಡ್ ಟೆಸ್ಟ್ ಮಾಡಿಸಿಕೊಂಡು ಬಂದಿದ್ದೆನು. ನಾನು ಈ ದಿನ ಹಾಸ್ಪಿಟಲ್‌ಗೆ ಅಡ್ಮಿಟ್ ಆಗಿ ಬ್ಲಡ್ 2 ಬಾಟಲ್ ಹಾಕಿಸಿಕೊಳ್ಳುವುದಕ್ಕೆ ಹೋಗಿದ್ದೆನು. ಡಾಕ್ಟರ್ ಅನಿಲ್‌ರವರು ಇಲ್ಲದ ಕಾರಣ ಸಿಟಿ ಹಾಸ್ಪಿಟಲ್‌ಗೆ ಹೋಗಿ ಬಂದು ಈ ದಿನ ರಜೆ ಹಾಕಿಕೊಂಡು ಹೋಗುವುದಕ್ಕೆ ಬಂದಿದ್ದೆನು. ಕೆಲಸದ ಒತ್ತಡ ಇದ್ದ ಕಾರಣ ರಜೆ ಹಾಕಲಿಲ್ಲ. ನಾನು ಹಾಸ್ಪಿಟಲ್‌ಗೆ ಅಡ್ಮಿಟ್ ಆಗಬೇಕಾಗಿದೆ. ಅದು ನನ್ನ ಸ್ವಂತ ದುಡ್ಡು ಆಗಿರುತ್ತದೆ. ನನ್ನಿಂದ ಏನೂ ತಪ್ಪು ನಡೆದಿಲ್ಲ" ಎಂದು ಸಮಜಾಯಿಷಿ ನೀಡಿರುತ್ತಾರೆ. ಈ ಬಗ್ಗೆ ದೂರುದಾರರನ್ನು ಕೇಳಲಾಗಿ ಅದು ಸುಳ್ಳು ಸಮಜಾಯಿಷಿ ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

9) ದೂರುದಾರರ ಹತ್ತಿರ ಇರುವ ವಾಯ್ಸ್ ರೆಕಾರ್ಡರ್‌ನ್ನು ಹಾಜರುಪಡಿಸುವಂತೆ ದೂರುದಾರರಿಗೆ ಕೇಳಿದಾಗ ಸದರಿಯವರು ವಾಯ್ಸ್ ರೆಕಾರ್ಡರ್‌ನ್ನು ತನಿಖಾಧಿಕಾರಿಯವರಿಗೆ ಹಾಜರುಪಡಿಸಿದ್ದು ಅದನ್ನು ಕೇಳಿಸಿ ಲಿಪೀಕರಣ ಮಾಡಿ ಸಿ.ಡಿ.ಗೆ ವರ್ಗಾಯಿಸಿ ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಗಳನ್ನು ಎದುರುದಾರರ ಕಛೇರಿಯ ಸಹಾಯಕಿಯವರಾದ ಶ್ರೀಮತಿ ತ್ರಿವೇಣಿ, ದ್ವಿತೀಯ ದರ್ಜೆ ನೌಕರರು ಸಂಭಾಷಣೆಯನ್ನು ಆಲಿಸಿ ಅದರಲ್ಲಿಯ ಒಂದು ಧ್ವನಿಯು ಎದುರುದಾರರದ್ದಾಗಿರುತ್ತದೆ ಎಂದು ಗುರುತಿಸಿರುತ್ತಾರೆ. ದೂರುದಾರರಿಗೆ ಸಂಬಂಧಿಸಿದ ದಾಖಲೆಗಳನ್ನು ಎದುರುದಾರರು ಹಾಜರುಪಡಿಸಿದ್ದು ಅವುಗಳ ಜೆರಾಕ್ಸ್ ಪ್ರತಿಗಳನ್ನು ತೆಗೆಸಿ ಎದುರುದಾರರ ಮೇಲಾಧಿಕಾರಿಗಳಾದ ಪುತ್ತೂರು ತಹಶೀಲ್ದಾರ್‌ರವರಾದ ಶ್ರೀ ಅನಂತ ಶಂಕರ್‌ರವರನ್ನು ಕರೆಸಿಕೊಂಡು ಅವರಿಂದ ದೃಢೀಕರಿಸಿ ವಶಪಡಿಸಿಕೊಂಡು, ಮೂಲ ದಾಖಲಾತಿಗಳನ್ನು ಶ್ರೀಮತಿ ತ್ರಿವೇಣಿರವರಿಗೆ ತನಿಖಾಧಿಕಾರಿಗಳು ಹಿಂತಿರುಗಿಸಿರುತ್ತಾರೆ. ಟ್ರ್ಯಾಪ್ ಕಾಲಕ್ಕೆ ಪ್ರಮುಖ ಘಟನೆಗಳ ಫೋಟೋ ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1-15 ರಿಂದ ಸಾಯಂಕಾಲ 4-00 ಗಂಟೆಯವರೆಗೆ ಲ್ಯಾಪ್‌ಟಾಪ್‌ನಲ್ಲಿ ಉಕ್ತ ಲೇಖನ ನೀಡಿ ಗಣಕೀಕರಿಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

10) ಪ್ರಸ್ತುತ ಪ್ರಕರಣದಲ್ಲಿ ಎದುರುದಾರರಿಗೆ ದಿನಾಂಕ 23/12/2021 ರಂದು ಪರಿವೀಕ್ಷಣಾ ಟಿಪ್ಪಣಿಯು ಜಾರಿಯಾಗಿ ಸಮಜಾಯಿಷಿ ಕೇಳಲಾಗಿ ಅವರು ತಮ್ಮ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಗೌರವಾನ್ವಿತ ಉಪಲೋಕಾಯುಕ್ತರ ಆದೇಶದ ಮೇರೆಗೆ ಎದುರುದಾರರ ದೂರವಾಣಿಗೆ ಕರೆ ಮಾಡಿ ಸಮಜಾಯಿಷಿ ನೀಡುವಂತೆ ಕೋರಿದಾಗ ಸದರಿಯವರು ಏರುಧ್ವನಿಯಿಂದ ಮಾತನಾಡಿ ತಮ್ಮ ಮೇಲಿರುವ ಕ್ರಿಮಿನಲ್ ಪ್ರಕರಣಗಳು ಮುಗಿದ ನಂತರ ಸಮಜಾಯಿಷಿ ನೀಡುವುದಾಗಿ ಹೇಳಿದ್ದರಿಂದ ಸದರಿಯವರಿಂದ ಯಾವುದೇ ಸಮಜಾಯಿಷಿ ಸ್ವೀಕೃತವಾಗದೇ ಇರುವುದರಿಂದ ಪರಿವೀಕ್ಷಣಾ ಟಿಪ್ಪಣಿಗೆ ಅವರಿಂದ ಸಮಜಾಯಿಷಿ ಇಲ್ಲವೆಂದು ಪರಿಗಣಿಸಲಾಗಿದೆ. ಸದರಿಯವರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ವಾಯ್ಸ್ ರೆಕಾರ್ಡರ್‌ನಲ್ಲಿ ಮಾತನಾಡಿದ ಸಂಭಾಷಣೆ, ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಸ್ವೀಕರಿಸಿದ ಬಗ್ಗೆ ರಾಸಾಯನಿಕ ವಿಶ್ಲೇಷಣಾ ವರದಿಯಿಂದ ದೃಢಪಟ್ಟಿರುತ್ತದೆ.

11) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಯಾವುದೇ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

12) ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

13) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

14) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

15) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

16) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

17) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phanindra 16/6/22

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.